ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಇರತಕ್ಕ ನ್ಯೂನತೆಯನ್ನು ಸರಿಪಡಿಸುವುದು

751(821) ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಇರುವ ಆಪರೇಷನ್ ಥಿಯೇಟರ್‌ಗಳೆಷ್ಟು?

ಆ) ಅವುಗಳನ್ನು ಪ್ರಸ್ತುತ ಎಷ್ಟು ಕಾರ್ಯ ನಿರ್ವಹಿಸುತ್ತಿವೆ;

ಇ) ಉಳಿದವು ಸ್ಥಗಿತಗೊಂಡಿರಲು ಕಾರಣಗಳೇನು?

ಈ) ಈ ಆಸ್ಪತ್ರೆಯಲ್ಲಿ ಹಾರ್ಟ್ ಲಂಗ್ ಉಪಕರಣ, ಕ್ಯಾತ್ ಲ್ಯಾಬ್ ಕೆಟ್ಟಿದ್ದು ರೋಗಿಗಳು 3-4 ತಿಂಗಳುಗಳ ಕಾಲ ಹೃದಯ ಶಸ್ತ್ರ ಚಿಕಿತ್ಸೆಗೆ ಕಾಯಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಉ) ಹಾಗಿದ್ದಲ್ಲಿ, ಈ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಎರಡು

ಆ) ಒಂದು

ಇ) ಒಂದು ಆಪರೇಷನ್ ಥಿಯೇಟರ್‌ನಲ್ಲಿನ ಹಾರ್ಟ್‌ಲಂಗ್ ಮೆಷಿನ್ ಕೆಟ್ಟು ಹೋಗಿದ್ದು, ಅದನ್ನು ಸರಿಪಡಿಸಲು ಪ್ರಯತ್ನಿಸಿದಾಗ ಅದನ್ನು ರಿಪೇರಿ ಮಾಡಲು ಸಾಧ್ಯವಿಲ್ಲ ಎಂದು ತಿಳಿದು ಬಂದಿದೆ. ಆದ್ದರಿಂದ ಒಂದು ಆಪರೇಷನ್ ಥಿಯೇಟರ್ ಕಾರ್ಯ ನಿರತವಾಗಿರುವುದಿಲ್ಲ.

ಈ) ಇಲ್ಲ

ಉ) ಪ್ರಸ್ತುತ ಈ ಸಂಸ್ಥೆಯಲ್ಲಿ 2 ಕ್ಯಾತ್‌ಲ್ಯಾಬ್‌ಗಳಿದ್ದು, ಎರಡು ಸುಸ್ಥಿತಿಯಲ್ಲಿರುತ್ತವೆ. ಒಂದು ಕ್ಯಾತ್ ಲ್ಯಾಬ್‌ನಲ್ಲಿ ಎಲ್ಲಾ ತರಹದ ಕಾರ್ಯವಿಧಾನವನ್ನು ನಡೆಸಬಹುದಾಗಿರುತ್ತದೆ. ಹಾಗೂ ಇನ್ನೊಂದು ಕ್ಯಾತ್ ಲ್ಯಾಬ್‌ನಲ್ಲಿ ಕೆಲವು ಆಯ್ದ ಕಾರ್ಯ ವಿಧಾನಗಳಾದ, ಪೇಸ್ ಮೇಕರ್ ಅಳವಡಿಸುವಿಕೆ, ಪಿ. ಟಿ. ಎಂ. ಸಿ. ಇತ್ಯಾದಿಗಳನ್ನು ಮಾಡಬಹುದಾಗಿರುತ್ತದೆ.

ಕ್ಯಾತ್ ಕಾರ್ಯ ವಿಧಾನಕ್ಕೆ 10-15 ದಿನಗಳು ಮಾತ್ರ ಕಾಯಬೇಕಾಗಿರುತ್ತದೆ. ಪ್ರಸ್ತುತ ಒಂದೇ ಆಪರೇಷನ್ ಥಿಯೇಟರ್ ಕಾರ್ಯನಿರತವಾಗಿರುವುದರಿಂದ ಶಸ್ತ್ರ ಚಿಕಿತ್ಸೆಗಾಗಿ ರೋಗಿಗಳು 2-3 ತಿಂಗಳು ಕಾಯಬೇಕಾಗಿರುತ್ತದೆ. ಈ ಆಸ್ಪತ್ರೆಯನ್ನು ಇನ್ನು 2-3 ತಿಂಗಳುಗಳಲ್ಲಿ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತದೆ. ದಿನಾಂಕ 12-3-2001 ರಂದು ನಡೆಯುವ ಈ ಸಂಸ್ಥೆಯ ಆಡಳಿತ ಮಂಡಳಿ ತೀರ್ಮಾನಿಸಲಾಗುತ್ತದೆ.

ನೂತನ ಆಸ್ಪತ್ರೆಗೆ 3 ಹೊಸ ಹಾರ್ಟ್‌ಲಂಗ್ ಮೆಷಿನ್ ಅನ್ನು ಖರೀದಿ ಮಾಡುತ್ತಿದ್ದು, ಇದಕ್ಕೆ ಈಗಾಗಲೇ ಟೆಂಡರ್‌ಗಳನ್ನು ಕರೆದಿದ್ದು ತಾಂತ್ರಿಕ ಸಮಿತಿ, ಪರಚೇಸ್ ಕಮಿಟಿ, ಹೆಫವರ್ ಕಮಿಟಿ ಈಗಾಗಲೇ ಟೆಂಡರ್‌ಗಳನ್ನು ಪರಿಶೀಲಿಸಿದ್ದು ಸಧ್ಯದಲ್ಲೇ ಹಾರ್ಟ್‌ಲಂಗ್ ಮೆಷಿನ್ ಖರೀದಿಸಲು ಟೆಂಡರ್ ಅನ್ನು ಅಂತಿಮಗೊಳಿಸಲಾಗಿದೆ.

ಹೊಸ ಆಸ್ಪತ್ರೆ ಕಟ್ಟಡಕ್ಕೆ 3 ಹೊಸ ಕ್ಯಾತ್ ಲ್ಯಾಬ್‌ಗಳನ್ನು ಖರೀದಿಸಿದ್ದು ಇದು ಈಗಾಗಲೇ ಕಟ್ಟಡಕ್ಕೆ ಬಂದಿರುತ್ತದೆ. ಈ ಕ್ಯಾತ್ ಲ್ಯಾಬ್‌ಗಳು ಆಸ್ಪತ್ರೆ ಸ್ಥಳಾಂತರಗೊಂಡ ನಂತರ ಕಾರ್ಯ ನಿರ್ವಹಿಸಲು ಪ್ರಾರಂಭಿಸುತ್ತವೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತರೆಯಲ್ಲಿ ಸೌಲಭ್ಯಗಳ ಕೊರತೆ

752(758) ಶ್ರೀ ಎಸ್.ವಿ. ರವೀಂದ್ರನಾಥ್ (ಮಯ ಕೊಂಡ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಚಿಕಿತ್ಸಾ ಸೌಲಭ್ಯಗಳೇನು?

ಆ) ಚಿಕಿತ್ಸಾ ಸೌಲಭ್ಯಗಳು, ಎಲ್ಲಾ ರೋಗಿಗಳಿಗೂ ಸಿಗುತ್ತಿವೆಯೆ;

ಇ) ಇಲ್ಲಿ ವೈದ್ಯರ ಸಂಖ್ಯೆ ಎಷ್ಟು ವೆದ್ಯರುಗಳು ಯಾವ ಯಾವ ವಿಷಯಗಳಲ್ಲಿ ವಿಶೇಷ ಪರಿಣಿತಿ ಪಡೆದವರಾಗಿದ್ದಾರೆ;

ಈ) ಪ್ರಯೋಗಾರ್ಥವಾಗಿ " ವಿದ್ಯಾರ್ಥಿ ವೈದ್ಯರಿಗೆ" ಚಿಕಿತ್ಸೆ ನೀಡಲು ಅವಕಾಶ ಕೊಟ್ಟು ಹಿರಿಯ ವೈದ್ಯರು ಸುಮ್ಮನಾಗುತ್ತಾರೆಂಬ ದೂರಿರುವುದು ನಿಜವೆ;

ಉ) ಹಾಗಿದ್ದಲ್ಲಿ ಹಿರಿಯ ವೈದ್ಯರು ರೋಗ ತಪಾಸಣೆಗೆ ಸ್ಪಂದಿಸುತ್ತಿಲ್ಲವೇ?

ಡಾ.ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಗಳಾದ ನ್ಯೂರೋಸರ್ಜರಿ ಕಾರ್ಡಿಯಾಲಜಿ, ಯರಾಲಜಿ, ಸೆಪ್ರಾಲಜಿ, ರೇಡಿಯೋ ಡಯಾಗ್ನಸಿಸ್, ನ್ಯೂಕ್ಲಿಯರ್ ಮೆಡಿಸಿನ್ ಮತ್ತು ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆಗಳು ಹಾಗೂ ವೈದ್ಯಕೀಯ ಶಸ್ತ್ರ ಚಿಕಿತ್ಸೆ, ಅಸ್ಥಿ ಚಿಕಿತ್ಸೆ ಮುಂತಾದ ಸೌಲಭ್ಯಗಳು ಇರುತ್ತವೆ.

ಆ) ಎಲ್ಲಾ ತರಹದ ರೋಗಿಗಳಿಗೂ ಚಿಕಿತ್ಸಾ ಸೌಲಭ್ಯಗಳು ಸಿಗುತ್ತಿದೆ.